(ಶ್ರೀ ಜಿ. ರಾಮೇಗೌಡ)

ಹೇಳಿರತಕ್ಕ ವರದಿಗಳಲ್ಲಿ ಕಾಲುಭಾಗ ಮೊತ್ತ ಕೂಡ ವಿಲೇವಾರಿಯಾಗದಿರುವುದಕ್ಕೆ ಕಾರಣವಾಗಿದೆಯಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಅವರಿಗೆ ಸಾಕಷ್ಟು ಸಿಬ್ಬಂದಿಯನ್ನೂ ಹೆಚ್ಚು ಮಾಡಿದ್ದೇವೆ. ಅವರ ಅಸಾನುಕೂಲಗಳನ್ನು ತಪ್ಪಿಸದೆ ಇಲ್ಲ. ಅದರ ಬಗ್ಗೆಯೂ ಸಾಕಷ್ಟು ಪ್ರಯತ್ನಗಳನ್ನು ನಡೆಸಲಾಗಿದೆ.

ಶ್ರೀ ಜಿ. ರಾಮೇಗೌಡ: ಈಗ ತಾವು ಇದಕ್ಕಾಗಿ ಹೆಚ್ಚುವರಿ ಸಿಬ್ಬಂದಿಯನ್ನು ಕೊಟ್ಟಿದ್ದೀರಿ. ಆದ್ದರಿಂದ ಉಳಿದಿರತಕ್ಕ ಎಲ್ಲಾ ಪ್ರಕರಣಗಳನ್ನು ಪೂರ್ತಿಯಾಗಿ ತನಿಖೆಮಾಡಲು ಅದಕ್ಕೇನಾದರೂ ಗೊತ್ತಾದ ಕಾಲವನ್ನು ನಿಗದಿ ಮಾಡಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಈಗಾಗಲೇ ಕಾಲಾವಕಾಶವನ್ನು ಕೊಟ್ಟಿದೆ. ಅಲ್ಲಿ ಇನ್ನೂ ಉಳಿಯತಕ್ಕ ಪ್ರಕರಣಗಳ ಬಗ್ಗೆ ಅವರ ಅಗತ್ಯಗಳನ್ನು ನೋಡಿಕೊಂಡು ತೆಕ್ಷಣವೇ ಎಲ್ಲ ಪ್ರಕರಣಗಳನ್ನು ಜಾಗ್ರತೆಯಾಗಿ ಮುಗಿಸಬೇಕೆಂದು ಸೂಚನೆಯನ್ನು ಕೊಡುತ್ತೇವೆ.

DEPARTMENTWISE RECRUITMENT TO STATE CIVIL SERVICE

86. SRI K. SIDDAIAH (Santhemarahally).—

Will the Chief Minister be pleased to state :—

(*a*) whether the departmentwise recruitment to the State Civil Services has been abolished ;

(*b*) if so, the agency which makes the recruitments now ;

(*c*) whether any rules or regulations are laid down for making such recruitment ;

(*d*) the principles of which the suitability of candidates for recruitment to a particular department is judged and the rules, if any, laid down for following such principles ?

SRI N. HUTCHMASTI GOWDA (Minister for Revenue).—on behalf of SRI D. DEVARAJ URS (Chief Minister).—

(*a*) No

(*b*) Does not arise

(*c*) Yes

(*d*) The qualifications for any particular post in any department are prescribed in the Cadre and Recruitment Rules of that Department. Unless the Cadre and Recruitment Rules prescribe any particular method of recruitment the recruitment is required to be done in accordance with the Mysore State Civil Services (Direct Recruitment by Selection) Rules, 1973 and it was required to be done before the coming into force of these rules, in accordance with the Mysore State Civil Services (Direct Recruitment by Selection) Rules, 1967.

ಶ್ರೀ ಕೆ. ಸಿದ್ದಯ್ಯ :—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂಬುದಾಗಿ ಹೇಳಿದೆ. ಹಾಗಾದರೆ, ಯಾವ್ಯಾವ ಹುದ್ದೆಗಳನ್ನು ಯಾರ್ಯಾರು ಯಾವ ರೀತಿಯಲ್ಲಿ ನೇಮಕಮಾಡುತ್ತಾರೆ? ಅಡಕ್ಕೇನಾದರೂ ಸರ್ಕಾರದ ಆಜ್ಞೆ ಇದೆಯೇ? ಅದರ ಪ್ರಕಾರ ನೇಮಕವಾಗುತ್ತಿದೆಯೇ?

‡ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಒಟ್ಟು 69 ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿಗಳಿವೆ. ಆ ಕಮಿಟಿಗಳಲ್ಲಿ ಕೆಳದರ್ಜೆ ನೌಕರರ ಹುದ್ದೆಗಳನ್ನು ಮಾತ್ರ ಅವರು ತೀರ್ಮಾನಮಾಡಿ ಭರ್ತಿಮಾಡುತ್ತಾರೆ. ಅವರು ಮಾಡತಕ್ಕ ಸಂಬಳಪ ದರ್ಜೆಗಳು ಯಾವುವೆಂದರೆ, ರೂ. 90-200, ರೂ. 100-220 ರೂ. 120-210, ರೂ. 130-290, ಅದರ ಜೊತೆಗೆ ಸ್ಟೆನೊಗ್ರಾಫರ್ ಹುದ್ದೆಗಳನ್ನೂ ಸಹ ತೀರ್ಮಾನಮಾಡುತ್ತಾರೆ. ಉಳಿದ ನೌಕರಿಗಳನ್ನು ಪಿ. ಎಸ್. ಸಿ. ಮುಖಾಂತರ ತೀರ್ಮಾನಮಾಡುತ್ತಾರೆ.

ಶ್ರೀ ಕೆ. ಸಿದ್ದಯ್ಯ :—ರೆಕ್ರೂಟ್‌ಮೆಂಟ್ ಕಮಿಟಿಗಳೇ ಮಾಡಲಿ ಅಥವಾ ಪಿ. ಎಸ್. ಸಿ. ಯವರೇ ಮಾಡಲಿ, ಎಷ್ಟು ಪಂಗಡಗಳವರಿಗೆ ಪ್ರತಿಯೊಂದು ಇಲಾಖೆಯಲ್ಲಿ ರಿಜರ್ವೇಷನ್ ಇಷ್ಟು ಇರಬೇಕೆಂಬ ಬಗ್ಗೆ ಸರ್ಕಾರದ ಆಜ್ಞೆ ಇಲ್ಲವೇ?

ಶ್ರೀ ಎಸ್. ಹುಚ್ಚಮಾಸ್ತಿಗೌಡ:— ಡಿಪಾರ್ಟ್‌ಮೆಂಟ್‌ವೈಸ್ ರೆಕ್ರೂಟ್‌ಮೆಂಟ್ ಮಾಡುವಾಗ ನಿಮ್ನವರ್ಗದವರಿಗೆ ಪ್ರೊಪೋರ್ಷನಲ್ಲಾಗಿ ನೌಕರಿಗಳನ್ನು ಕೊಡುವಾಗ ರಿಜರ್ವ್ ಮ್ಯಾಡತಕ್ಕ ನಿರ್ಧಾರವನ್ನು ಕೂಡಲೇ ಮಾಡಲೇ ಬೇಕೆಂದು ನಾವು ಎಲ್ಲ ಇಲಾಖೆಗಳಿಗೂ ನಿರ್ದಿಷ್ಟವಾಗಿ ಸಲಹೆಗಳನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು:— ಈ ಸರ್ಕಾರದಲ್ಲಿ ಒಟ್ಟು ಇಲಾಖೆಗಳು ಎಷ್ಟಿವೆ? ಆಪ್ಷಗಳಲ್ಲಿ ಎಷ್ಟರಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇಮಕಾತಿಗಳು ಆಗುತ್ತಿವೆ. ಇನ್ನು ಎಷ್ಟು ಇಲಾಖೆಗಳಲ್ಲಿ ಆ ರೀತಿಯಾಗಿ ಆಗುತ್ತಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಅದರ ಬಗ್ಗೆ ಪ್ರತ್ಯೇಕವಾಗಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್:— ಅನೇಕ ಕಾರ್ಪೊರೇಷನ್‌ಗಳಲ್ಲಿ ಮತ್ತು ಇತರ ಬೋರ್ಡ್‌ಗಳಲ್ಲಿ ನೇಮಕಾತಿಗಳನ್ನು ಮ್ಯಾಡುವಾಗ ನಿಮ್ನಪಂಗಡದವರಿಗೆ ರಿಜರ್ವೇಷನ್ ಇರುವುದನ್ನು ವೇಂಟೇನ್ ಮಾಡಬೇಕೆಂದು ಸರ್ಕಾರದವರು ಆವರಿಗೆ ಆದೇಶವನ್ನು ಕೊಡುವುದಕ್ಕೆ ತಯಾರಾಗಿದ್ದಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಾವು ಈಗಾಗಲೇ ಆವರಿಗೂ ಸೂಚನೆಗಳನ್ನು ಇದರ ಬಗ್ಗೆ ಕೊಟ್ಟಿದ್ದೇವೆ. ಕಾರ್ಪೊರೇಷನ್ ಮತ್ತು ಬೋರ್ಡುಗಳಲ್ಲಿಯೂ ಕೂಡ ಜನರಲ್ ರೆಕ್ರೂಟ್‌ಮೆಂಟ್ ಪಾಲಿಸಿ ಏನಿದೆಯೋ ಅದನ್ನು ಅಲ್ಲಿಯೂ ಅನುಸರಿಸಬೇಕೆಂದು ಹೇಳಿದ್ದೇವೆ.

ಶ್ರೀ ಜೆ. ಎಲ್. ಕಟ್ಟಾಡಿ:— ಈ ರಾಜ್ಯದಲ್ಲಿರತಕ್ಕ ಎಲ್ಲ ಇಲಾಖೆಗಳ ಪೈಕಿ ಕೇವಲ 8 ಇಲಾಖೆಗಳಲ್ಲಿ ಇನ್ನೂ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಅಳವಡಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಎಲ್ಲೆಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲವೋ ಅಂತಹ ಕಡೆಗಳಲ್ಲಿ ಅದರಂತೆ ಕ್ರಮ ತೆಗೆದುಕೊಳ್ಳಬೇಕೆಂದೂ ಅದನ್ನು ಯಾವ ರೀತಿ ಮಾಡಬೇಕೆಂದೂ ಕೆಲವಾರು ಸೂಚನೆಗಳನ್ನು ವಿಧಾಯುಕ್ತವಾಗಿ ತಿಳಿಸಲಾಗಿದೆ.

ಶ್ರೀ ಕೆ. ಸಿದ್ದಯ್ಯ:— ನನಗೆ ಮಂತ್ರಿಗಳಿಂದ ನಿರ್ದಿಷ್ಟವಾಗಿ ಉತ್ತರ ಬಂದಿಲ್ಲ. 1969ರ ಆರ್ಡರ್ ಪ್ರಕಾರ ಪ್ರತಿಯೊಂದು ಡಿಪಾರ್ಟ್‌ಮೆಂಟ್ ವೈಸ್

ರೆಕ್ರೂಟ್‌ಮೆಂಟ್ ಮಾಡುವಾಗ ಬ್ಯಾಕ್‌ವರ್ಡ್ ಕಮ್ಯೂನಿಟೀಸಿಗೆ ಮತ್ತು ನಿಮ್ಮ ಪಂಗಡದವರಿಗೆ ಪ್ರೊಪೋರ್ಷನಲ್ಲಾಗಿ ನೌಕರಿಗಳನ್ನು ರಿಜರ್ವ್ ಮಾಡಬೇಕೆಂದು ಇದ್ದರೂ ಅದನ್ನು ಈಗ ಸರ್ಕಾರದವರು ಕಿತ್ತುಹಾಕಿದ್ದಾರೆ. ಆದರೂ ಆ ರೀತಿ ಇಲ್ಲವೆಂದು ತಾವು ಹೇಳಿದ್ದೀರಿ. ಅದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—1969 ರಲ್ಲಿ ಇದರ ಬಗ್ಗೆ ಇದ್ದಂಥ ರೂಲ್ಸ್‌ನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದೆ. ಅದರ ಪ್ರಕಾರ ಈಗ ಯಾವ ರೀತಿ ಮಾಡಬೇಕೆಂಬುದನ್ನು ಮತ್ತು 1973 ನೇ ಇಸವಿಯ ಒಂದು ರೂಲನ್ನು ಈಗಾಗಲೇ ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಮೊದಲಿದ್ದ ಕಮಿಟಿಗಳಲ್ಲಿ ಡಿಪಾರ್ಟ್‌ಮೆಂಟಿನ ಮುಖ್ಯಾಧಿಕಾರಿಗಳು, ಮತ್ತು ಡೆಪ್ಯುಟಿ ಸೆಕ್ರೆಟರಿಗಳಿಗೆ ಮೇಲ್ಪಟ್ಟ ಅಧಿಕಾರಿಗಳೊಬ್ಬರು ಮತ್ತು ರಿಪ್ರೆಸೆಂಟೆಡ್ ಅಧಿಕಾರಿ ಜಿಲ್ಲಾಧಿಕಾರಿಗಳಿಗೆ ಮೇಲ್ಪಟ್ಟವರು ಒಬ್ಬರು ಇರಬೇಕೆಂದಿತ್ತು. ಈಗ ಅದಕ್ಕೆ ಬದಲು ಮೂರು ಜನರನ್ನು ಖಾಸಗೀಯವರನ್ನೇ ಹಾಕಬೇಕೆಂದು ಮಾಡಿದ್ದೇವೆ. ಅದರ ಪ್ರಕಾರ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧ ಪಟ್ಟವರೂ ಸಹ ಇರಬೇಕೆಂದು ಒಂದು ರೂಲನ್ನು ಬದಲಾವಣೆ ಮಾಡಿದ್ದೇವೆ. ಇದೂ ಅಲ್ಲದೆ ಮೊದಲು ಅಲ್ಲಿ ಕ್ಯಾಂಡಿಡೇಟ್ಸ್ ಎಷ್ಟು ಬೇಕೋ ಅದರ 4 ರಷ್ಟು ಅರ್ಜಿಗಳನ್ನು ಮಾತ್ರ ಅವರು ಇಂಟರ್‌ವ್ಯೂ ಸಮಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದಿತ್ತು. ಅದೇ ರೂಲನ್ನು ಮಾತ್ರ ಈಗಲೂ ಉಳಿಸಿಕೊಂಡಿದೆ. ಕ್ವಾಲಿಫೈಡ್ ಎಗ್ಜಾಮಿನೇಷನ್ಸ್ ಲೆಕ್ಕಕ್ಕೆ ತೆಗೆದುಕೊಂಡು ಇಂಟರ್‌ವ್ಯೂ ಮಾಡದೇ 30 ಮಾರ್ಕ್ಸ್ ಕೊಡಬೇಕೆಂದಿತ್ತು. ಎರಡನೆಯಸಾರಿ ಉಮೇದುವಾರರನ್ನು ಅರಿಸುವ ಕ್ರಮವಿತ್ತು. ಈಗ ಅದಕ್ಕೆ ಬದಲಾಗಿ ಕ್ವಾಲಿಫೈಡ್ ಎಗ್ಜಾಮಿನೇಷನ್ಸ್ ಆಗಿದ್ದರೆ ಅಂತಹವರಿಗೆ 30 ಅಂಕಗಳನ್ನು ಕೊಡುವುದಕ್ಕೆ ಬದಲಾಗಿ 100 ಅಂಕಗಳನ್ನು ಕೊಟ್ಟು ಅವರನ್ನೂ ಕೆಲವು ಸಂದರ್ಭಗಳಲ್ಲಿ ಅರಿಸಬೇಕೆಂದು ಈಗಾಗಲೇ ಅವರಿಗೆ ತಿಳಿಸಿದೆ.

SCHOLARSHIPS TO SCHEDULED CASTES AND SCHEDULED TRIBES STUDENTS OF BELGAUM DISTRICT

113. P. P. HEGRE :—(Chikodi)

Will the Minister for Community Development and Social Welfare be pleased to state :—

(*a*) the total number of Scheduled Castes 'and Scheduled Tribes' college students in Belgaum District